

ಹೂವು, ಬಳ್ಳಿ, ಎಲೆಯ ವಿನ್ಯಾಸದ ಮೆಹೆಂದಿ ಕೈಗಳಲ್ಲಿ ಪ್ರಕೃತಿಯ ಪಡಿಯಚ್ಚಿನಂತೆ ಕಂಗೊಳಿಸುತ್ತದೆ. ಈ ಬಳ್ಳಿ ಎಲೆಯಾಕಾರದ ವಿನ್ಯಾಸವನ್ನು ಇಡೀ ಕೈಗಳಿಗೆ ಹಾಕಿಕೊಳ್ಳಬೇಕೆಂದಿಲ್ಲ. ಅಂಗೈ ಅಂಚಿಗೆ, ಪಾದದ ತುದಿಗೆ ಹಚ್ಚಿದರೂ ಸಖತ್ ಲುಕ್ ಕೊಡುತ್ತದೆ. ಕೈಗಳಲ್ಲಿ ವೃತ್ತಾಕಾರದ ವಿನ್ಯಾಸದ ಮೆಹೆಂದಿ ರಾಯಲ್ ಲುಕ್ ಕೊಡುತ್ತದೆ. ಈ ವಿನ್ಯಾಸಕ್ಕೆ 'ನಿತ್ಯಹರಿದ್ವರ್ಣ' ಎಂದು ಹೆಸರು. ನವರಾತ್ರಿ ಹಬ್ಬದ ದಿನಗಳಲ್ಲಿ ರಂಗು ರಂಗಿನ ಸೀರೆ ಉಟ್ಟು, ಒಡವೆ ತೊಟ್ಟು ಮೆರೆಯುವ ಮಹಿಳೆಯರಿಗೆ ಕೈಗಳಲ್ಲಿ ಮೆಹೆಂದಿ ವಿನ್ಯಾಸವನ್ನೂ ಹಾಕಿಕೊಂಡರೆ ಫ್ಯಾಷನ್ ಜೊತೆಗೆ ಸಂಭ್ರಮವೂ ಜುಗಲಬಂದಿ ಹಾಡುತ್ತದೆ.

ವಧುವಿಗಾಗಿಯೇ ಅರೇಬಿಕ್ ಮೆಹೆಂದಿ ವಿನ್ಯಾಸ ಹೆಚ್ಚು ಜನಪ್ರಿಯವಾಗುತ್ತಿದ್ದು, ಅದ್ಭುತವಾಗಿ ಕಾಣುತ್ತದೆ. ಈ ಅರೇಬಿಕ್ ಮೆಹೆಂದಿ ವಿನ್ಯಾಸವು ಸುಲಭ, ಸುಂದರ ಮತ್ತು ಬೇಗನೆ ಒಣಗುತ್ತದೆ. ಹೀಗಾಗಿ ವಿವಿಧ ಛಾಯೆಗಳೊಂದಿಗೆ ಪ್ರಯೋಗ ಮಾಡುವುದು ಸುಲಭ. ಅಂಗೈಯ ಹಿಂಭಾಗದಲ್ಲಿರುವ ಮೆಹೆಂದಿಗೂ ಛಾಯೆ, ತಂತ್ರಗಳಿಂದ ಕೂಡಿದ ವಿನ್ಯಾಸ ಚೆಂದ ಕಾಣಲು ಸಹಕಾರಿ. ಮೆರೂನ್, ಕಪ್ಪು, ತಿಳಿ ಹಾಗೂ ಗಾಢ ಕಿತ್ತಳೆ, ಹಳದಿ ಮುಂತಾದ ವಿವಿಧ ಬಣ್ಣಗಳನ್ನು ಬಳಸಿ ಮಾಡುವ ಅರೇಬಿಕ್ ಮೆಹೆಂದಿ ಈಗೀಗ ಜನಪ್ರಿಯ.

## ಮನಸೆಳೆಯುವ ಹೂವಿನಾಕಾರ

ಮಲ್ಲಿಗೆ ಮೊಗ್ಗುಗಳನ್ನು ಪೋಣಿಸಿದಂತೆ, ಗುಲಾಬಿ ಹೂವು ಅರೆಬಿರಿದಂತೆ, ಸೇವಂತಿಗೆ ಎಸಳುಗಳನ್ನು ದಳ ದಳವಾಗಿ ಅರಳಿಸಿದಂತೆ, ತಾಜಾ ಸಂಪಿಗೆ ಕಂಪು ಸೂಸುತ್ತದೆಯೋ ಎಂಬಂತೆ ಭಾಸವಾಗುವ ವಿನ್ಯಾಸ, ಚೆಂಡು ಹೂವು ಒತ್ತೊತ್ತಾಗಿ ದಳಗಳನ್ನು ತನ್ನೊಡಲಲ್ಲಿ ತುಂಬಿಕೊಂಡಂತೆ, ಬಣ್ಣ ಬಣ್ಣದ ಡೇರೆ ಹೂಗಳು ಕಣ್ಣುಗಳನ್ನು ಕುಕ್ಕುವಂತೆ ಕಾಣಿಸುವ ಹೂವಿನ ಮೆಹೆಂದಿ ವಿನ್ಯಾಸ, ಅಷ್ಟೇ ಏಕೆ ನರ್ತನ ಮಾಡುವ ನವಿಲಿನ ವಿನ್ಯಾಸವನ್ನೂ ಫ್ಯಾನ್ಸಿ ಸ್ಟೋರ್ ಮುಂದೆ ಸ್ಟೂಲ್ ಹಾಕಿಕೊಂಡು ಕುಳಿತು ಕೈಚಾಚುವ ಹುಡುಗಿಯರ ಕೈಗಳಿಗೆ ಚಕಚಕನೆ ವಿನ್ಯಾಸ ಮಾಡುತ್ತಾನೆ ಮೆಹೆಂದಿ ವಿನ್ಯಾಸಕಾರ. ಕೈಗಳಿಗೆ ಹಾಕಿಸಿಕೊಂಡ ವಿನ್ಯಾಸವೇ ಪಾದಗಳ ಮೇಲೂ ಮೂಡಿಬಂದರೆ ಅದರ ಸೊಬಗೇ ಅನನ್ಯ.

## ಸಾಂಪ್ರದಾಯಿಕ ಮೆಹೆಂದಿ

ಪ್ರಾಚೀನ ಭಾರತದಲ್ಲಿ ಹುಟ್ಟಿಕೊಂಡ ಒಂದು ಸಾಂಪ್ರದಾಯಿಕ ಕಲೆಯೇ ಮೆಹೆಂದಿ ಕಲೆ. ಇದನ್ನು ಗೋರಂಟಿ, ಹೆನ್ನಾ ಎಂದೂ ಕರೆಯಲಾಗುತ್ತದೆ. ಮದುವೆ, ಮುಂಜಿ, ಎಲ್ಲ ಹಬ್ಬಗಳಲ್ಲಿ ಮುಖ್ಯವಾಗಿ ನವರಾತ್ರಿ, ದೀಪಾವಳಿ, ಯುಗಾದಿಯಂತಹ ವಿಶೇಷ ಹಬ್ಬಗಳಲ್ಲಿ ಹೆಂಗಳೆಯರು ತಮ್ಮ ಕೈ ಕಾಲುಗಳ ಅಲಂಕಾರಕ್ಕೆ ಮೆಹೆಂದಿ ಬಳಸುವುದು ರೂಢಿ. ಹಿಂದಿನ ಕಾಲದಿಂದಲೂ ಅರಿಶಿನ ಮತ್ತು ಗೋರಂಟಿಗಳನ್ನು ಮಹಿಳೆಯರು ಸೌಂದರ್ಯವರ್ಧಕವಾಗಿ ಬಳಸುತ್ತಿದ್ದರು.

ಮೆಹೆಂದಿಯನ್ನು ಗೋರಂಟಿ ಗಿಡದ ಎಲೆಗಳನ್ನು ಒಣಗಿಸಿ ಪುಡಿ ಮಾಡಿ ಬಳಸಲಾಗುತ್ತದೆ. ಇದು ಪಾಚಿ ಬಣ್ಣವನ್ನು ಹೊಂದಿರುತ್ತದೆ. ಈ ಪುಡಿಯನ್ನು ನಿಂಬೆರಸ ಮತ್ತು ನೀಲಗಿರಿ ಎಣ್ಣೆಯೊಂದಿಗೆ ಕಲಸಿ ಪೇಸ್ಟ್ ಮಾಡಿ ನೆನೆಸಿ ಇಟ್ಟು ಬಳಿಕ ಕೈ–ಕಾಲುಗಳಿಗೆ ಚಂದದ ಚಿತ್ತಾರ ಬಿಡಿಸಲಾಗುತ್ತದೆ.

ಅಂದ ಹಾಗೆ 'ಮೆಹೆಂದಿ' ಎಂಬ ಪದ ಸಂಸ್ಕೃತದ 'ಮೆಂಧಿಕಾ' ಎಂಬ ಶಬ್ದದಿಂದ ಬಂದಿದೆ. ಮೆಂಧಿಕಾ ಎಂದರೆ ಗೋರಂಟಿ ಎಂದರ್ಥ.

ಈಗೀಗ ಮಹಿಳೆಯರು ಮೆಹೆಂದಿ ಹಾಕಿಸಿಕೊಳ್ಳುವುದು ಒಂದು ಫ್ಯಾಷನ್ ಆಗಿ ಮಾರ್ಪಾಡಾಗಿದೆ. ಸದ್ಯ ರೆಡಿಮೇಡ್ ಮೆಹೆಂದಿ ಲಭ್ಯವಿದೆ. ಸಮಾರಂಭಕ್ಕೆ ಹೋಗುವ ಸ್ವಲ್ಪ ಸಮಯದ ಮುಂಚೆಯೂ ಈ ರೆಡಿಮೇಡ್ ಮೆಹೆಂದಿ ಬಳಸಬಹುದು. ತ್ರಿಕೋನಾಕಾರದ ಪ್ಲಾಸ್ಟಿಕ್ ಕವರ್‌ಗಳಲ್ಲಿ ತುಂಬಿರುವ ಈ ಮೆಹೆಂದಿ ಎಲ್ಲಾ ಫ್ಯಾನ್ಸಿ ಸ್ಟೋರ್‌ಗಳಲ್ಲಿ ಸಿಗುತ್ತದೆ.

'ಮದರಂಗಿಯಲ್ಲಿ ಮನಸಿನ ರಂಗು ಮೂಡಿದೆ...' ಹಾಡು ಕೇಳಿದ್ದೀರಲ್ಲ? ಚೌತಿ, ನವರಾತ್ರಿ, ದೀಪಾವಳಿ, ಈದ್ ಹಬ್ಬಗಳಿಗೂ ಮೆಹೆಂದಿ ಹಾಕಿಸಿಕೊಳ್ಳುವುದು ಮಹಿಳೆಯರ ಖುಷಿ. ಹಬ್ಬ ಕಳೆ ಕಟ್ಟುವುದು ಇಂಥ ಖುಷಿ, ಸಂಭ್ರಮದಿಂದ ತಾನೇ?

## ವಿನ್ಯಾಸ ಹಲವು ಮಹಿಳೆಯರ ಒಲವು

- ಇಂಡೊ–ಅರೇಬಿಕ್ ಮೆಹೆಂದಿ ವಿನ್ಯಾಸ ಅತ್ಯಂತ ಸೂಕ್ಷ್ಮ ಚಿತ್ತಾರಗಳಿಂದ ಕೂಡಿದೆ. ಸಾಂಪ್ರದಾಯಿಕ ವಿನ್ಯಾಸಗಳು ವಧುವಿಗೆ ಸೂಕ್ತವೆನಿಸಿವೆ.
- ಉತ್ತರ ಆಫ್ರಿಕಾದ ಮೊರಾಕೊದಲ್ಲಿ ಮಹಿಳೆಯರು ಹಚ್ಚಿಕೊಳ್ಳುವ ಮೆಹೆಂದಿ ವಿನ್ಯಾಸ ಜಗತ್ತಿನೆಲ್ಲೆಡೆ ಬಳಸಲಾಗುತ್ತಿದೆ. 'ಮೊರಕ್ಕನ್ ವಿನ್ಯಾಸ' ಎಂದು ಹೇಳಲಾಗುವ ಇದು ಜ್ಯಾಮಿತಿ ಹಾಗೂ ಸುಂದರ ಹೂವುಗಳ ವಿನ್ಯಾಸವನ್ನು ಒಳಗೊಂಡಿದೆ. ಈ ವಿನ್ಯಾಸದಲ್ಲಿ ಚೌಕ, ತ್ರಿಕೋನ, ಆಯತಗಳಿದ್ದು, ಇನ್ನೂ ಸೊಗಸಾಗಿ ಕಾಣಲು ಹೂವುಗಳನ್ನು ಬಿಡಿಸಲಾಗುತ್ತದೆ.
- ಮೊರಕ್ಕನ್ ವಿನ್ಯಾಸವನ್ನೇ ಹೋಲುವ ಮತ್ತೊಂದು ಮೆಹೆಂದಿ ವಿನ್ಯಾಸ ಕ್ರಿಸ್‌ಕ್ರಾಸ್ ವಿಧದ್ದು, ಇದು ಸರಳ ಹಾಗೂ ಅನನ್ಯ ನೋಟವನ್ನು ಕೊಡುತ್ತದೆ. ಅಂಗೈ ಮೇಲೆ ತ್ರಿಕೋನಾಕಾರ ಬಿಡಿಸಿ ಅದರೊಳಗೆ ಮೋಟಿಫ್‌ಗಳನ್ನು ವಿನ್ಯಾಸ ಮಾಡಲಾಗುತ್ತದೆ.
- ರಾಜಸ್ಥಾನಿ ಮೆಹೆಂದಿ ವಿನ್ಯಾಸ ಅತ್ಯಂತ ಸುಂದರ. ಈ ವಿನ್ಯಾಸದಲ್ಲಿ ಸುಂದರ ಹೂವುಗಳು, ನವಿಲುಗಳು, ಇತರ ಪಕ್ಷಿಗಳ ವಿನ್ಯಾಸವಿದ್ದು, ಇಡೀ ಅಂಗೈಯನ್ನು ಆವರಿಸುವುದು. ಅಲ್ಲದೆ ಬೆರಳಿನಿಂದ ಹಿಡಿದು ಮೊಣಕೈವರೆಗೂ ಇರುವ ಚಿತ್ತಾರ ವಧುವಿಗಾಗಿಯೇ ರೂಪಿಸಿದಂತೆ ಕಾಣುತ್ತದೆ.
- ಸುಂದರವಾಗಿರುವ ಚುಕ್ಕಿ ಹಾಗೂ ಸುರುಳಿಗಳಿರುವ ವಿನ್ಯಾಸವೇ ಮೊಘಲ್ಯ ವಿನ್ಯಾಸ. ಇದು ಹಳೆಯ ಹಾಗೂ ಸಾಂಪ್ರದಾಯಿಕ ವಿನ್ಯಾಸ ಎನಿಸಿಕೊಂಡಿದೆ.

